## ಮೃತ ಠೇವಣಿದಾರನ ಸಾವಧಿ ಠೇವಣಿ ಮೇಲೆ ಬಡ್ಡಿ ಸಂದಾಯ

ಡಿಬಿಒಡಿ ಸಂಖ್ಯೆ. ಡಿಐಆರ್. ಬಿಸಿ. 64/13.03.00/2000-2001

ಜನವರಿ 03, 2001,
ಪುಷ್ಯ 13, 1922 (ಶಕ)

ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಸ್ಥಳೀಯ ಪ್ರದೇಶ ಬ್ಯಾಂಕುಗಳು ಸೇರಿದಂತೆ)
ಮಾನ್ಯರೇ,

**ಮೃತ ಠೇವಣಿದಾರನ ಸಾವಧಿ ಠೇವಣಿಯ ಮೇಲೆ ಬಡ್ಡಿ ಸಂದಾಯ**

ಮೃತ ಠೇವಣಿದಾರನ ಸಾವಧಿ ಠೇವಣಿಯ ಮೇಲೆ ಬಡ್ಡಿ ಸಂದಾಯಕ್ಕೆ ಸಂಬಂಧಿಸಿದ ನಮ್ಮ ಮಾರ್ಗದರ್ಶಕ ಸೂಚನೆ ಡಿಬಿಒಡಿ,ನಂ.ಡಿಐಆರ್.ಬಿಸಿ. 46/13.03.00/2000-2001, ದಿನಾಂಕ ನವೆಂಬರ್ 4, 2000ದ 14 ನೇ ಪ್ಯಾರಾವನ್ನು ಮತ್ತು ನಮ್ಮ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಡಿಐಆರ್.ಬಿಸಿ.48/13.03.00/2000-2001, ದಿನಾಂಕ ನವೆಂಬರ್ 4, 2000ದ 9ನೇ ಪ್ಯಾರಾವನ್ನು ದಯವಿಟ್ಟು ನೋಡಿ. ಪ್ರಸ್ತುತ, ಠೇವಣಿದಾರನ ಮರಣವು ಠೇವಣಿ ಅವಧಿ ತುಂಬುವ ದಿನಾಂಕಕ್ಕೆ ಮೊದಲೇ ಸಂಭವಿಸಿದ್ದರೆ ಮಾತ್ರ, ಠೇವಣಿಯು ವಾಸ್ತವವಾಗಿ ಅದನ್ನು ಸಂದಾಯ ಮಾಡುವ ದಿನಾಂಕದವರೆಗೆ ಬ್ಯಾಂಕಿನಲ್ಲೇ ಇದ್ದಂತಹ ಅವಧಿಗೆ ಅನ್ವಯವಾಗುವ ಬಡ್ಡಿದರದಲ್ಲಿ ಅವಧಿ ತುಂಬುವ ದಿನಾಂಕದ ಮೇಲಿನ ಅವಧಿಗೆ ಮೃತ ಠೇವಣಿ ಖಾತೆದಾರನ ಬೇಡಿಕೆದಾರರಿಗೆ ಬಡ್ಡಿ ಸಂದಾಯ ಮಾಡಲಾಗುತ್ತದೆ. ಠೇವಣಿದಾರನ ಮರಣವು ಸಾವಧಿ ಠೇವಣಿ ಅವಧಿ ತುಂಬಿದ ನಂತರ ಸಂಭವಿಸಿರುವಲ್ಲಿ ಠೇವಣಿದಾರನು, ಠೇವಣಿಯನ್ನು ಮತ್ತಷ್ಟು ಅವಧಿಗೆ ನವೀಕರಿಸಲು ವಿಫಲನಾಗಿದ್ದಾನೆಂಬ ಆಧಾರದ ಮೇಲೆ ಸಾವಧಿ ಠೇವಣಿಯು ಅವಧಿ ತುಂಬಿದ ದಿನಾಂಕದ ಮೇಲಿನ ಅವಧಿಗೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡಲಾಗುವುದಿಲ್ಲ.

2. ಬ್ಯಾಂಕು ಠೇವಣಿಯ ಪ್ರತಿಫಲಗಳನ್ನು ಸಂದಾಯ ಮಾಡುವ ದಿನಾಂಕದವರೆಗೆ ನಿಧಿಗಳನ್ನು ಅನುಭವಿಸುತ್ತಾದ್ದರಿಂದ, ಠೇವಣಿದಾರನು ಠೇವಣಿಯನ್ನು ಮತ್ತಷ್ಟು ಅವಧಿಗೆ ನವೀಕರಿಸದಿರುವಲ್ಲಿ ಅವಧಿ ತುಂಬಿದ ದಿನಾಂಕದ ನಂತರ ಠೇವಣಿದಾರನು ಮೃತಪಟ್ಟ ಸಂದರ್ಭದಲ್ಲಿ ಕೂಡ ಸ್ವಲ್ಪ ಮಟ್ಟಿನ ಬಡ್ಡಿಯನ್ನು ಠೇವಣಿದಾರನ ಕಾನೂನು ಸಮ್ಮತ ವಾರಸುದಾರರಿಗೆ/ ನಾಮ ನಿರ್ದೇಶಿತರಿಗೆ ನೀಡುವಂತೆ ಕೋರಿರುವ ಮನವಿಗಳು ನಮಗೆ ಬರುತ್ತಿವೆ. ಈ ವಿಷಯವನ್ನು ನಾವು ಪರಿಶೀಲಿಸಿದ್ದೇವೆ ಮತ್ತು ಅಂಥ ಪ್ರಕರಣಗಳಲ್ಲಿ, ಅವಧಿ ತುಂಬಿದ ದಿನಾಂಕದಿಂದ ಹಣ ಸಂದಾಯದ ದಿನಾಂಕದವರೆಗೆ ಅವಧಿ ತುಂಬಿದ ದಿನಾಂಕದಂದು ಪ್ರವರ್ತನೆಯಲ್ಲಿದ್ದ ಉಳಿತಾಯ ಠೇವಣಿ ದರದಲ್ಲಿ (ರೂಪಾಯಿಯಲ್ಲಿ ಮಾಡಿದ ಠೇವಣಿಗಳ ವಿಷಯದಲ್ಲಿ) ಅಥವಾ ನಿವಾಸಿ ವಿದೇಶಿ ಕರೆನ್ಸಿ (ಆರ್‌ಎಫ್‌ಸಿ) ಉಳಿತಾಯ ಠೇವಣಿ ದರದಲ್ಲಿ (ಎಫ್‌ಸಿಎನ್‌ಆರ್ (ಬಿ) ಠೇವಣಿಗಳ ವಿಷಯದಲ್ಲಿ) ಬಡ್ಡಿಯನ್ನು ಬ್ಯಾಂಕುಗಳು ಸಂದಾಯ ಮಾಡಬೇಕೆಂದು ಈಗ ನಿರ್ಧರಿಸಲಾಗಿದೆ.

3. ಅದರಂತೆ, ತಿದ್ದುಪಡಿ ಮಾಡುವ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಸಂಖ್ಯೆ.ಡಿಐಆರ್.ಬಿಸಿ 62/863/13.03.00/2001 ದಿನಾಂಕ ಜನವರಿ 03, 2001 ನ್ನು ಲಗತ್ತಿಸಲಾಗಿದೆ.

4. ಅದರ ಪರಿಣಾಮವಾಗಿ ಮಾಡಬೇಕಾದ ಈ ಮುಂದಿನ ತಿದ್ದುಪಡಿಗಳನ್ನು ಸೂಚನೆಗಳ ಕೈಪಿಡಿ ಸಂಪುಟ-1, ಭಾಗ - I ರಲ್ಲಿ ಮಾಡತಕ್ಕದ್ದು.

   (i) 9.I. 11 ನೇ ಪ್ಯಾರಾದ ಹಾಲಿ ಇರುವ (i) ನೇ ಖಂಡದ (iii) ನೇ ಉಪಖಂಡವನ್ನು ಲಗತ್ತಿಸಿರುವ ಸ್ಲಿಪ್ 10ರ ಪ್ರಕಾರ ತಿದ್ದುಪಡಿ ಮಾಡತಕ್ಕದ್ದು.

   (ii) 9. III ನೇ ಪ್ಯಾರಾದ ಹಾಲಿ ಇರುವ (ix) ನೇ ಖಂಡದ (iii) ನೇ ಉಪಖಂಡವನ್ನು ಲಗತ್ತಿಸಿರುವ ಸ್ಲಿಪ್ ಸಂಖ್ಯೆ 11ರ ಪ್ರಕಾರ ತಿದ್ದುಪಡಿ ಮಾಡತಕ್ಕದ್ದು.

ತಮ್ಮ ವಿಶ್ವಾಸಿ,

**(ಪಿ.ವಿ. ಸುಬ್ಬರಾವ್)**
ಮುಖ್ಯ ಪ್ರಧಾನ ವ್ಯವಸ್ಥಾಪಕರು.